**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿ.ಎಂ.ಎಸ್.ಎಸ್.ವೈ.)ಯ ಹೃದ್ರೋಗ ವಿಭಾಗದಲ್ಲಿರುವ ಕ್ಯಾತ್ ಲ್ಯಾಬ್ ಕಳೆದ 6 ತಿಂಗಳಿನಿಂದ ಕಾರ್ಯನಿರ್ವಹಿಸುತ್ತಿಲ್ಲ. ಇಲ್ಲಿಗೆ ಬರುವ ಬಡ ಹೃದ್ರೋಗಿಗಳಿಗೆ ಇಲ್ಲಿ ಚಿಕಿತ್ಸೆ ಸಿಗದೆ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹಣ ನೀಡಿ ಚಿಕಿತ್ಸೆ ಪಡೆಯುವಂತಾಗಿದೆ. ಈ ರೀತಿ 6 ತಿಂಗಳಿನಿಂದ ಕ್ಯಾತ್ ಲ್ಯಾಬ್ ಕೆಟ್ಟುನಿಂತಿದ್ದರು ಇದುವರೆವಿಗೆ ದುರಸ್ತಿ ಮಾಡದೆ ಅಥವಾ ಹೊಸದಾಗಿ ಟೆಂಡರ್ ಕರೆಯದೆ ಇರಲು ಕಾರಣಗಳೇನು? ಇದರಿಂದ ಬಡರೋಗಿಗಳಿಗೆ ಮತ್ತು ಆ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಡಿ.ಎಂ. ಕಾರ್ಡಿಯಾಲಜಿ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ತೊಂದರೆಯಾಗಿರುತ್ತದೆ. ಆದ್ದರಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿ.ಎಂ.ಎಸ್.ಎಸ್.ವೈ)ಯ ಹೃದ್ರೋಗ ವಿಭಾಗದಲ್ಲಿರುವ ಕ್ಯಾತ್ ಲ್ಯಾಬ್ ಕೂಡಲೇ ದುರಸ್ತಿಗೊಳಿಸಿ ಬಡ ಹೃದ್ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ.

**ಉತ್ತರ:-**

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ಶಾಸ್ತ್ರ ವಿಭಾಗದಲ್ಲಿ ಈಗಾಗಲೇ ಲಭ್ಯವಿರುವ ಕ್ಯಾತ್‌ಲ್ಯಾಬ್ ಉಪಕರಣವನ್ನು 2009 ರಲ್ಲಿ ಬುನಾದಿಗೊಳಿಸಲಾಗಿದ್ದು, ಸುಮಾರು 14 ವರ್ಷ ಹಳೆದಾಗಿರುತ್ತದೆ. ಸದರಿ ಉಪಕರಣದ ತಯಾರಕರಾದ M/s Siemens Healthcare Private Limited ರವರು ಕ್ಯಾತ್‌ಲ್ಯಾಬ್ ಉಪಕರಣವು ಎಂಡ್ ಆಫ್ ಸಪೋರ್ಟ್ (end of Support ) ಎಂದು ತಿಳಿಸಿರುತ್ತಾರೆ ಹಾಗೂ ಬಿಡಿಭಾಗಗಳು ಲಭ್ಯವಿರುವುದಿಲ್ಲ.

ಆದುದರಿಂದ, ಹೊಸ ಕ್ಯಾತ್‌ಲ್ಯಾಬ್ ಉಪಕರಣವನ್ನು ಖರೀದಿಸುವ ಸಲುವಾಗಿ ದಿನಾಂಕ. 16.09.2023 ರಂದು ನಡೆದ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ರೂ. 4.05 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ, ಹೊಸ ಕ್ಯಾತ್ ಲ್ಯಾಬ್ ಉಪಕರಣವನ್ನು ಖರೀದಿಸುವ ಸಲುವಾಗಿ ದಿನಾಂಕ. 16.10.2023 ರಂದು ಇ-ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ನಲ್ಲಿ ಏಕೈಕ ಬಿಡ್ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ದಿನಾಂಕ. 16.02.2024 ರಂದು ಪುನ: ಮರು ಇ- ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅರ್ಹ ಟೆಂಡರ್‌ದಾರರು ಸಲ್ಲಿಸಿರುವ ಆರ್ಥಿಕ ಬಿಡ್ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿದ್ದು ಸದರಿ ಟೆಂಡರ್ ಅನ್ನು ರದ್ದುಗೊಳಿಸಲಾಗಿರುತ್ತದೆ.

ಕ್ಯಾತ್‌ಲ್ಯಾಬ್ ಖರೀದಿಗಾಗಿ ಮಂಜೂರಾದ ಮೊತ್ತ ಮತ್ತು ಟೆಂಡರ್‌ಗಿಟ್ಟ ಮೊತ್ತದಲ್ಲಿ ವ್ಯತ್ಯಾಸಗಳು ಕಂಡು ಬಂದ ಹಿನ್ನೆಲೆಯಲ್ಲಿ, ಸದರಿ ಉಪಕರಣವನ್ನು ಖರೀದಿಸಲು ಸೂಕ್ತ ಪ್ರಾಧಿಕಾರದಿಂದ specifications ಪಡೆದು ಅಂದಾಜು ವಿವರಗಳನ್ನು ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ತಿಳಿಸಲಾಗಿರುತ್ತದೆ. ಈ ಸಂಬಂಧ ದಿನಾಂಕ: 06.06.2024ರಂದು ಟೆಂಡರ್ ತಾಂತ್ರಿಕ ಸಮಿತಿ ಸಭೆಯನ್ನು ಕೈಗೊಂಡಿದ್ದು, ಸದರಿ ಸಭೆಯಲ್ಲಿ ಸದಸ್ಯರುಗಳು ಒಮ್ಮತದಿಂದ ಕ್ಯಾತ್ ಲ್ಯಾಬ್ ಉಪಕರಣದ Specification ಅನ್ನು ಒಪ್ಪಿರುತ್ತಾರೆ. ಆದುದರಿಂದ ಮರುಟೆಂಡರ್ ಅನ್ನು ಶೀಘ್ರದಲ್ಲಿಯೇ ಆಹ್ವಾನಿಸಲಾಗುವುದು.

**ಸಂಖ್ಯೆ:** ಎಂಇಡಿ 363 ಎಂಎಂಸಿ 2024

(ಡಾ|| ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು